Reg. No. | | | | | | | | | | | | |

# BBAKALN 102

**I Semester B.B.A. Examination, December 2023/January 2024**
**(NEP 2020) (2022 – 23 Batch Onwards)**
**KANNADA LANGUAGE (AECC)**

Time : 2 Hours Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಕವಿಯ ನಾಡು–ನುಡಿಯ ಅಭಿಮಾನ ಮಂಗಲ ಗೀತೆ ಕವನದಲ್ಲಿ ಅಭಿವ್ಯಕ್ತಗೊಂಡ ಬಗೆಯನ್ನು ವಿವರಿಸಿರಿ.

**ಅಥವಾ**

ಮನೆಯಿಂದ ಮನೆಗೆ ಹೋಗುವಾಗ ಎದುರಾಗುತ್ತಿದ್ದ ಸಮಸ್ಯೆಗಳೇನು ತಿಳಿಸಿ.

2) ಆಧುನಿಕತೆ ಜನಜೀವನದ ಮೇಲೆ ತರುವ ಬದಲಾವಣೆಯನ್ನು 'ಗೇಣಿದಾರರ ಏಣಿಯಾಟ' ಲೇಖನ ಹೇಗೆ ಚಿತ್ರಿಸಿದೆ ?

**ಅಥವಾ**

'ಮೊಸರಿನ ಮಂಗಮ್ಮ' ಕತೆ ಕುಟುಂಬದೊಳಗಿನ ಸಂಬಂಧಗಳ ಏರಿಳಿತವನ್ನು ಹೇಗೆ ಚಿತ್ರಿಸುತ್ತದೆ ?

3) ಬಡತನ ಹಾಗೂ ದುರ್ಬಲತೆ ಹೆಣ್ಣಿನ ಮೇಲಿನ ಶೋಷಣೆಗೆ ಹೇಗೆ ಕಾರಣವಾಗುತ್ತದೆ ?

**ಅಥವಾ**

'ಇತಿಹಾಸ ಎಂಬ ಗುರು' ಲೇಖನ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಹೇಗೆ ಸಹಕಾರಿ ?

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : **(3×5=15)**

1) ಕನ್ನಡ ನಾಡಿನ ಸೌಂದರ್ಯವನ್ನು ಆಂಡಯ್ಯ ಕವಿ ಗುರುತಿಸಿದ ಬಗೆಯನ್ನು ವಿವರಿಸಿ.

**ಅಥವಾ**

'ಪೆಣ್ಣು ಪೆತ್ತುದರಿಂದ ಪೆಸರೆನಿಸಿತು' ಕಾವ್ಯದಲ್ಲಿ ಹೆಣ್ಣಿನ ಕುರಿತು ಹೊನ್ನಮ್ಮನ ನಿಲುವೇನು ? ವಿಶ್ಲೇಷಿಸಿ.

2) 'ಲೂಟಿಯ ಹೆದ್ದಾರಿಗಳು' ಲೇಖನದ ವಸ್ತು ಮತ್ತು ಆಶಯವನ್ನು ವಿವೇಚಿಸಿರಿ.

**ಅಥವಾ**

ಪ್ರತಿಯೊಬ್ಬ ಸಾಧಕರ ಹಿಂದೆ ಶಕ್ತಿಯಾಗಿರುವುದು ಸೃಜನಶೀಲತೆ ? ಹೇಗೆ ?

3) ಪ್ರೇಮವು ಮನಸ್ಸನ್ನು ಕರಗಿಸಿ ಶಾಶ್ವತ ಬದಲಾವಣೆಯನ್ನು ತರುತ್ತದೆ. ಕರ್ಜಗಿಯವರ ಲೇಖನದ ಆಧಾರದಿಂದ ವಿವರಿಸಿರಿ.

**ಅಥವಾ**

ರೈತರು ಮತ್ತು ಕಾಳಿದಾಸನ ಮುಖಾಮುಖಿ ಕವನದಲ್ಲಿ ಅನಾವರಣಗೊಂಡ ಬಗೆಯನ್ನು ವಿವರಿಸಿರಿ.

III. ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. **(1×5=5)**

ಕೋಟೆ ಕೊತ್ತಲ ಕಟ್ಟಿ, ಮಂದಿಮಾರ್ಬಲವಿಟ್ಟು,
ಗಡಿಯನ್ನು ಗುಡಿಯನ್ನು ಕಾದ ಭಟರು !
ಕನ್ನಡಿಗರೊಗ್ಗಟ್ಟು, ಧೀರದೀಕ್ಷೆಯ ತೊಟ್ಟು,
ಪ್ರಾಣವನೆ ಪಣವಿಟ್ಟು ಕಣಕಿಳಿದರು !

**ಅಥವಾ**

ಕೂಲಿ ಕುಂಬಳಿಯವರ ಪಾಲಿನ ಮೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೋ
ಗುಡಿಯೊಳಗೆ ಗಣಣ, ಮಾ –
ಹಡಿಯೊಳಗೆ ತನನ, ಅಂ –
ಗಡಿಯೊಳಗೆ ಝುಣಝುಣ ನುಡಿಗೊಡುತಿತ್ತೊ .

IV. ಕೆಳಗಿನ **ಎರಡು** ಸಾಲುಗಳ ಸಂದರ್ಭ ಸೂಚಿಸಿ ಅರ್ಥ ವಿಶೇಷತೆಗಳನ್ನು ವಿವರಿಸಿರಿ. **(2×4=8)**

1) ಕನ್ನಡದ ಜೀವಕಳೆ ಹೊಮ್ಮುತಿದೆ ನೋಡು.

2) ಬಸಂತಂಗೆ ನೆಲೆವೀಡಾಗಿರ್ದುದು.

3) ಸರಕು ಸುಮ್ಮನೆ ಭಾರ, ಎಸೆಯಬಾರದೆ ಹೇಳು.

4) ಮನೆಯಲ್ಲಿ ಒಪ್ಪಾಗಿ ನೀ ಬಾಳಿ ನಡಿಯವ್ವಾ.

V. ಕೆಳಗಿನ ಪ್ರಶ್ನೆಗಳಿಗೆ **ಒಂದೊಂದು** ವಾಕ್ಯದಲ್ಲಿ ಉತ್ತರಿಸಿರಿ. (8×1=8)

1) 'ದುಡಿತವೇ ನನ್ನ ದೇವರು' ಯಾರ ಆತ್ಮಕಥೆ ?

2) 'ಮೈಸೂರು ಮಲ್ಲಿಗೆ' ಯಾವ ಕವನ ಸಂಕಲನ ?

3) 'ಅಂಬಿಕಾತನಯದತ್ತ' ಯಾರ ಕಾವ್ಯನಾಮ ?

4) ಇರುವುದೊಂದೆ ಭೂಮಿ ಯಾರ ಕೃತಿ ?

5) 'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕವಿ ಯಾರು ?

6) 'ಹದಿಬದೆಯ ಧರ್ಮ' ಯಾರ ಕೃತಿ ?

7) 'ಮಿಸ್ಸೈಲ್ ಮ್ಯಾನ್' ಎಂದು ಪ್ರಸಿದ್ಧರಾದವರು ಯಾರು ?

8) 'ಮೇಘದೂತ' ಯಾರ ಕೃತಿ ?